# ದ್ವೈತದರ್ಶನ

ಪ್ರೊ. ಎಚ್.ಎಸ್. ರಾಘವೇಂದ್ರಾಚಾರ್

**ಆಚಾರ್ಯರಲ್ಲಿ ಅರ್ವಾಚೀನರೂ ದ್ವೈತಸಿದ್ಧಾಂತದ ಪ್ರತಿಪಾದಕರೂ ಆದ ಶ್ರೀಮಧ್ವಾಚಾರ್ಯರು ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದು ಮಹಾಸಾಧನೆಗೈದ ಮಹನೀಯರು. ಇವರ ಭಕ್ತಿತತ್ತ್ವದ ಗಂಭೀರ ವಿಶ್ಲೇಷಣೆಯನ್ನು ಮಾಡಿರುವ ಲೇಖಕರು ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರು.**



ವೇದಾಂತವನ್ನು ವಿಭಿನ್ನ ದೃಷ್ಟಿಗಳಿಂದ ಪ್ರತಿಪಾದಿಸಿದ ದಕ್ಷಿಣಭಾರತದ ಮೂವರು ಮಹಾನ್ ಆಚಾರ್ಯರಲ್ಲಿ ೧೩ ನೇ ಶತಮಾನದಲ್ಲಿ ಪ್ರವರ್ಧಮಾನರಾಗಿದ್ದ ಶ್ರೀಮಧ್ವಾಚಾರ್ಯರೇ ಕಾಲದ ದೃಷ್ಟಿಯಿಂದ ಅರ್ವಾಚೀನರು. ಕರ್ಣಾಟಕ ಪ್ರಾಂತ್ಯದ ದಕ್ಷಿಣಕನ್ನಡ ಜಿಲ್ಲೆಯ ಉಡುಪಿಯ ಹತ್ತಿರವೇ ಇರುವ 'ಪಾಜಕ' ಎಂಬ ಗ್ರಾಮದಲ್ಲಿ ಇವರು ಜನಿಸಿದರು. ಇವರು ತಮ್ಮ ಪೂರ್ವಜನ್ಮಗಳಲ್ಲಿ ಮಹಾಭಾರತದ ಭೀಮನೂ ರಾಮಾಯಣದ ಆಂಜನೇಯನೂ ಆಗಿದ್ದರೆಂದು ಸಾಮಾನ್ಯ ಜನರ ನಂಬಿಕೆ. ಇವರು ರಾಮಾನುಜರಂತೆ ಭಕ್ತಿಮಾರ್ಗವನ್ನೇ ಉಪದೇಶಿಸಿದರು ಮತ್ತು ಸತ್ಯದ ಸಮಸ್ಯೆಯನ್ನು ಬಿಡಿಸಲು ತರ್ಕಬದ್ಧವಾದ ಬೌದ್ಧಿಕ ಮಾರ್ಗದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಇವರ ದರ್ಶನವನ್ನು ವ್ಯಾಖ್ಯಾನಿಸಿ, ಮೇಧಾವಿಗಳಿಗೂ ಸಾಮಾನ್ಯ ಜನರಿಗೂ ಉಪದೇಶಿಸಿದ ಇವರ ಶಿಷ್ಯಾಗ್ರಣಿಗಳೆಲ್ಲರೂ ಪ್ರಾಯಶಃ ಕರ್ಣಾಟಕಕ್ಕೆ ಸೇರಿದವರು. ಇವರ ಮತಾನುಯಾಯಿಗಳಾದ ಮಠಗಳಲ್ಲಿ ಹೆಚ್ಚಿನವು ಕರ್ಣಾಟಕದಲ್ಲಿಯೇ ಇವೆ. ಈಗ ನಾವು ಮಧ್ವಾಚಾರ್ಯರು ಉಪದೇಶಿಸಿದ ವೇದಾಂತ ಮತವನ್ನು ಸಮೀಕ್ಷಿಸೋಣ.

### ಮತ

ಬ್ರಹ್ಮಮೀಮಾಂಸೆಯ ಸಾಧನೆಯೇ, ಅಂದರೆ ಬ್ರಹ್ಮ ಜಿಜ್ಞಾಸೆಯೇ ಮನುಷ್ಯಜೀವನದ ಪರಮಪುರುಷಾರ್ಥ ಎಂದು ಮಧ್ವಾಚಾರ್ಯರು ಸರಿಯಾಗಿ ಗ್ರಹಿಸಿದರು. ಸರ್ವಸ್ವವನ್ನೂ ತನ್ನಲ್ಲಿ ಅಡಗಿಸಿಕೊಳ್ಳುವ ತತ್ವವೇ ಬ್ರಹ್ಮ; ಅಂತೆಯೇ ಬ್ರಹ್ಮ ಮೀಮಾಂಸೆಯೇ ಅದಕ್ಕೆ ಸಾಧನ. ಆದುದರಿಂದ ಅವರು ಕೊಟ್ಟಿರುವ ಧಾರ್ಮಿಕ ಜೀವನದ ವಿವರಣೆ ಕೇವಲ ನಂಬಿಕೆಗಾಗಲಿ, ಮತಕ್ಕಾಗಲಿ ಸೀಮಿತವಾಗಿಲ್ಲ. ಮತಾಚರಣೆಯು ದರ್ಶನದ ಪ್ರಾಯೋಗಿಕ ವಿಭಾಗ. ವೇದಾಂತಗಳ ದಾರ್ಶನಿಕ ಪ್ರತಿಪಾದನೆಗಳ ಸಮಸ್ಯೆ ಹಾಗೂ ಅವುಗಳ ಉಪದೇಶಗಳನ್ನು ನಿತ್ಯಜೀವನದಲ್ಲಿ ಆಚರಿಸುವ ಬಗೆಗೆ ಅವರು ತಾರ್ಕಿಕದೃಷ್ಟಿಯನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದರು. ಹೀಗಾಗಿ, ನಮ್ಮ ಜೀವನವನ್ನು ಸುವ್ಯವಸ್ಥೆಗೊಳಿಸಲು ಉಪಯುಕ್ತವಾದ ಕೆಲವು ವಿಷಯಗಳನ್ನು ಆಚಾರ್ಯರ ಕೃತಿಗಳಿಂದ ನಾವು ಸಂಗ್ರಹಿಸಬಹುದು.

ಶ್ರೀಮಧ್ವಾಚಾರ್ಯರು ತಮ್ಮ ಬ್ರಹ್ಮಜಿಜ್ಞಾಸಾಪೀಠಿಕೆಯನ್ನು ಈ ರೀತಿ ಮಾಡುತ್ತಾರೆ: ಪ್ರಪಂಚವು ಚಿತ್ತಚಾಂಚಲ್ಯವನ್ನು ಉಂಟುಮಾಡುವ ಅನೇಕ ವಿಷಯಗಳಿಂದ ಕೂಡಿದೆ. ಇವುಗಳ ಪ್ರಭಾವವಿಲ್ಲದಿರುವ ಜ್ಞಾನೇಂದ್ರಿಯಗಳೇ ಇಲ್ಲ. ಪ್ರತಿಯೊಂದು ಐಂದ್ರಿಯಕ ವಿಷಯವೂ ಆನಂದದಾಯಕವಾಗಿ ತೋರುತ್ತದೆಯಾದರೂ ಅದಕ್ಕೆ ಆನಂದ ಕೊಡುವ ಶಕ್ತಿಯಿಲ್ಲ. ಅದೂ ಅಲ್ಲದೆ, ಮಧ್ವಾಚಾರ್ಯರು ತಮ್ಮ 'ಅಣುವ್ಯಾಖ್ಯಾನ' ದಲ್ಲಿ ಹೇಳುವಂತೆ, ವಿಶುದ್ಧ ವಿಜ್ಞಾನವುಳ್ಳ ಜನರು, ಅಂದರೆ, ಪೂರ್ವಾಭಿಪ್ರಾಯವಿಲ್ಲದೆ, ಕೇವಲ ತತ್ವದ ಅನನ್ಯ ಆರಾಧಕರಾದವರು ವಿರಳ.

### ಬ್ರಹ್ಮಮೀಮಾಂಸೆ

ವೈಷ್ಣವ ನಿಯಮಗಳಲ್ಲಿ ಮತ್ತೆಲ್ಲದಕ್ಕಿಂತಲೂ ಬ್ರಹ್ಮ ಮೀಮಾಂಸೆಯೇ ಅತ್ಯಂತ ಶ್ರೇಷ್ಠವಾದುದು; ವೇದ ಪ್ರತಿಪಾದ್ಯನಾದ ಬ್ರಹ್ಮನು ಸಾಕ್ಷಾತ್ ವಿಷ್ಣುವೇ ಎಂಬುದು ಮಧ್ವಾಚಾರ್ಯರ

ಅಭಿಪ್ರಾಯ. ಮಧ್ವಾಚಾರ್ಯರು ತಮ್ಮ 'ಮಹಾಭಾರತ ತಾತ್ಪರ್ಯ ನಿರ್ಣಯ'ದಲ್ಲಿ, ಬ್ರಹ್ಮಮೀಮಾಂಸೆಯು ಸಾಧನೆಯನ್ನು ಈ ರೀತಿ ವಿವರಿಸುತ್ತಾರೆ:

"ಬ್ರಹ್ಮಸೂತ್ರಕಾರರಾದ ಬಾದರಾಯಣರು ವೇದಗಳ ವಿಭಾಗವನ್ನು ಮಾಡಿದ ನಂತರ ಕೆಲವು ಪುರಾಣಗಳನ್ನೂ ಇತಿಹಾಸಗಳನ್ನೂ ರಚಿಸಿದರು. ಇವೆರಡರಲ್ಲಿ ವಿಷ್ಣುಪಾರಮ್ಯ ಪ್ರತಿಪಾದಕವಾದವುಗಳನ್ನೇ ತೆಗೆದುಕೊಂಡು, ಬ್ರಹ್ಮಸೂತ್ರಗಳ ಸಹಾಯದಿಂದ ಇವುಗಳ ಅರ್ಥನಿರ್ಣಯ ಮಾಡಬೇಕು. ಶ್ರೇಷ್ಠ ನೀತಿಯಿಂದ ಜ್ಞಾನ ಉದಯಿಸುತ್ತದೆ. ಯಥಾರ್ಥ ಜ್ಞಾನಕ್ಕೆ ಉತ್ತಮ ಲಕ್ಷಣಗಳು ಮೂಲಭೂತವಾದವು. ಒಳ್ಳೆಯ ಲಕ್ಷಣಗಳು ಮತ್ತು ಶ್ರೇಷ್ಠ ನೈತಿಕತೆ – ಇವು ನಿಕಟ ಸಂಪರ್ಕವನ್ನು ಹೊಂದಿವೆ. ಅಂತಹ ಜನರಿಗೆ ಬ್ರಹ್ಮಜ್ಞಾನದಿಂದುಂಟಾದ ವಿಷ್ಣುಭಕ್ತಿಯು ಸಾಧ್ಯ. ಸುಲಕ್ಷಣ ಸಂಪನ್ನನೂ ಪ್ರಸನ್ನಮನಸ್ಕನೂ ಆದ ಆಚಾರ್ಯನಿಂದ ಕೊಡಲ್ಪಟ್ಟ ಜ್ಞಾನವೇ ಫಲಪ್ರದವಾಗುವುದು."

### ಕೆಲವು ನಿಯಮಗಳು

ಮಧ್ವಾಚಾರ್ಯರು ತಮ್ಮ **'ಕೃಷ್ಣಾಮೃತ ಮಹಾರ್ಣವ'** ಮತ್ತು **'ತಂತ್ರಸಾರ'** ಎಂಬ ಗ್ರಂಥಗಳಲ್ಲಿ ವಿಷ್ಣು ಸಾಕ್ಷಾತ್ಕಾರಕ್ಕೆ ಸಹಾಯಕ ವಾಗುವ, ಪುರಾಣಪ್ರತಿಪಾದಿತವಾದ ಕೆಲವು ನಿಯಮಗಳನ್ನು ಉಲ್ಲೇಖಿಸಿದ್ದಾರೆ. ಈ ಕೃತಿಗಳ ಕೊನೆಯ ಭಾಗಗಳಲ್ಲಿ ಬ್ರಹ್ಮ ಮೀಮಾಂಸಾ ಸಾಧನವೊಂದೇ ಬ್ರಹ್ಮಸಾಕ್ಷಾತ್ಕಾರದಲ್ಲಿ ಅಂದರೆ ವಿಷ್ಣುವಿನ ಸಾಕ್ಷಾತ್ಕಾರದಲ್ಲಿ ಕೊನೆಗೊಳ್ಳುತ್ತದೆ ಎಂದೂ ತೋರಿಸಿದ್ದಾರೆ. ಅವರು "ಕೃಷ್ಣಾಮೃತ ಮಹಾರ್ಣವ" ದಲ್ಲಿ ಹೀಗೆ ಹೇಳುತ್ತಾರೆ: **"ವಿಷ್ಣುವಿಗೆ ಸಮರ್ಪಣೆ ಮಾಡಿದ ದ್ರವ್ಯಗಳಿಂದಲೇ ಜೀವನ ನಡೆಸುವ ಅಭ್ಯಾಸವು ಮತ್ತೆಲ್ಲಕ್ಕಿಂತಲೂ ಮಿಗಿಲಾದುದು. ಪೂಜೆಯಲ್ಲಿ ಉಪಯೋಗಿಸಿದ ನಂತರ ಅವೆಲ್ಲವೂ ಪ್ರಸಾದ. ಸಾಲಿಗ್ರಾಮ ಶಿಲೆಯ ಪೂಜೆಯು ಅತ್ಯಂತ ಶ್ರೇಷ್ಠ. ಸಾಕ್ಷಾತ್ ಹರಿಯೇ ಈ ಶಿಲೆಯಲ್ಲಿ ವಾಸಿಸುತ್ತಾನೆ."**

ಪ್ರತಿಪಕ್ಷದ ಏಕಾದಶಿಯ ದಿವಸ ಉಪವಾಸವಿರುವುದು ಅವಶ್ಯವಾಗಿ ಪಾಲಿಸಬೇಕಾದ ಒಂದು ಮುಖ್ಯ ನಿಯಮ. ಕಾರಣ, ಆ ದಿವಸವು ವಿಷ್ಣುವಿಗೆ ಅರ್ಪಿತವಾಗಿದೆ. ವಿಷ್ಣುವಿನ ಚಿಹ್ನೆಗಳಾದ ಶಂಖ, ಚಕ್ರ, ಗದೆ ಮತ್ತು ಪದ್ಮ ಇವುಗಳನ್ನು ತನ್ನ ಶರೀರದ ಮೇಲೆ ಗೋಪಿಚಂದನವೆಂಬ ಮೃತ್ತಿಕೆಯಿಂದ ಅಂಕಿತ ಮಾಡಿಕೊಳ್ಳುವುದು ಒಂದು ಪವಿತ್ರಕಾರ್ಯ. ವೈಷ್ಣವ ಪುರಾಣಗಳಲ್ಲಿ ಹೇಳಿರುವ ವಿಷ್ಣುವಿನ ನಾಮಸಂಕೀರ್ತನವನ್ನು ಸರ್ವದಾ ಮಾಡಬೇಕು.

ಈ ವ್ರತಗಳನ್ನೂ ನಿಯಮಗಳನ್ನೂ ಪಾಲಿಸದಿದ್ದಲ್ಲಿ ವಿವಿಧ ಯಜ್ಞ ಯಾಗಾದಿಗಳೂ ದಾನ, ತಪಸ್ಸು, ಅಧ್ಯಯನ, ಮತ್ತು ಶ್ರಾದ್ಧಾದಿಗಳಿಂದ ಪಿತೃದೇವತೆಗಳ ಸಂತೃಪ್ತಿ – ಇವೆಲ್ಲವೂ ವ್ಯರ್ಥ. ಹೀಗೆ ವಿಷ್ಣುವಿನ ಅನನ್ಯಾರಾಧಕನ ಜೀವನವು ಪ್ರಶಂಸನೀಯ. ಬೇರೆ ಕ್ಷೇತ್ರದಲ್ಲಿ ಒಬ್ಬನು ಉನ್ನತ ಸ್ಥಾನವನ್ನು ಗಳಿಸಿದ್ದರೂ ಅವನು ಫಲಾಪೇಕ್ಷೆಯಿಲ್ಲದೆ ವಿಷ್ಣುವಿನ ಧ್ಯಾನವನ್ನು ಮತ್ತು ನಾಮಸಂಕೀರ್ತನವನ್ನು ಮಾಡಲು ಮರೆಯಬಾರದು. ಶ್ರುತಿಸ್ಮೃತಿಗಳು ವಿಧಿಸಿರುವ ನಿಯಮವಿದು. ಈ ರೀತಿ ನಿಯಮಗಳನ್ನುಲ್ಲೇಖಿಸಿ, ಉಪನಿಷತ್ತಿನ ವಾಕ್ಯವನ್ನು ಉದಾ ಹರಿಸುತ್ತಾ, ಬ್ರಹ್ಮಜ್ಞಾನದಿಂದುಂಟಾಗುವ ಫಲವೇ ಸಿದ್ಧಿಗೆ ದಾರಿ ಯಾಗುತ್ತದೆ; ಸಿದ್ಧಿಯನ್ನು ಸಾಧಿಸಿ ಕೊಡುವುದೇ **ವ್ರತ** ಅಥವಾ **ಆಚಾರ** ಎಂದು ಮಧ್ವಾಚಾರ್ಯರು ತೋರಿಸುತ್ತಾರೆ. ಅಂತಹ ವ್ರತಗಳೇ ವೇದಬೋಧಿತವಾದವುಗಳು.

ವಿಷ್ಣುವಿನ ಧ್ಯಾನ ಮಾಡಲು ಅನುಸರಿಸಬೇಕಾದ ವಿವಿಧ ನಿಯಮಗಳನ್ನು ಆಚಾರ್ಯರು ಉದ್ಧರಿಸಿದ್ದಾರೆ. ಈ ವಿಧವಾದ ಪೂಜೆಯು ಅವನಿಗೆ ಆನಂದವನ್ನುಂಟುಮಾಡುವುದು. ಏಕೆಂದರೆ, ಅವನ ಮೂರ್ತಿಯಲ್ಲಿ ವಿಶೇಷ ಸಾನ್ನಿಧ್ಯವಿದೆ. ಧ್ಯಾನವನ್ನು ಅನ್ವರ್ಥವಾಗಿ ಅನುಷ್ಠಾನ ಮಾಡಬೇಕಾದರೆ ಸೂಕ್ತ ಶಿಕ್ಷಣ ನೀಡುವ ಯೋಗ್ಯ ಗುರುವನ್ನು ಪಡೆಯಬೇಕು.

ಈ ಭಾವನೆಗಳನ್ನೆಲ್ಲಾ ವಿವರಿಸಿದ ಅನಂತರ ಮಧ್ವಾಚಾರ್ಯರು ಎರಡು ವಿಧವಾದ ಧ್ಯಾನಗಳ ವೈಶಿಷ್ಟ್ಯವನ್ನು ನಿರೂಪಿಸುತ್ತಾರೆ. (೧) **ಬ್ರಹ್ಮಮೀಮಾಂಸೆ** ಮತ್ತು (೨) ಯಮ, ನಿಯಮ, ಆಸನ ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಯೋಗಕ್ರಮಗಳನ್ನು ಅನುಸರಿಸಿ ಮಾಡಿದ **ಧ್ಯಾನ.** ಇವೆರಡರಲ್ಲಿ ಬ್ರಹ್ಮಮೀಮಾಂಸೆಯೇ ಅತ್ಯಂತ ಶ್ರೇಷ್ಠ ಏಕೆಂದರೆ, ಶಾಸ್ತ್ರದ ಅನವರತ ಅಧ್ಯಯನ ಮತ್ತು ಅಧ್ಯಾಪನಗಳು ಒಳಿತಿಗೆ ಕಾರಣಗಳು. ಈ ಆಚರಣೆಯೇ ವಿಷ್ಣುಸಾಕ್ಷಾತ್ಕಾರಕ್ಕೂ ಅದರ ಮೂಲಕ ಮೋಕ್ಷಕ್ಕೂ ದಾರಿಮಾಡಿಕೊಡಲು ಸಾಕು. ಸಾಕ್ಷಾ ತ್ಕಾರವು ನಿಜವಾದ ಅರ್ಥದಲ್ಲಿ, **'ಲಕ್ಷಣರೂಪವಾಗಿ ಉಕ್ತವಾದ ಭಕ್ತಿಯ ಫಲ'** ಎಂದು ಶ್ರೀಮಧ್ವರು ಹೇಳುತ್ತಾರೆ.

> **ಶ್ರೀಮಧ್ವಸಿದ್ಧಾಂತ**
>
> **ಶ್ರೀಮನ್ ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ತ್ವತಃ**
> **ಭಿನ್ನಾಜೀವಗಣಾಃ ಹರೇರನುಚರಾಃ ನೀಚೋಚ್ಚಭಾವಂಗತಾಃ ।**
> **ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ**
> **ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾ–**
> **ಮ್ನಾಯೈಕವೇದ್ಯೋ ಹರಿಃ॥**
>
> ಶ್ರೀಮಧ್ವಮತದಲ್ಲಿ ಹರಿಯೇ ಸರ್ವೋತ್ತಮ: ತಾತ್ತ್ವಿಕವಾಗಿ ಈ ಜಗತ್ತು ಸತ್ಯವಾದುದು. ಚೇತನ–ಅಚೇತನ ಮತ್ತು ಈಶ್ವರ – ಇವರಿಗಿರುವ ಭೇದವು ಸತ್ಯವಾದುದು, ಪಾರ ಮಾರ್ಥಿಕವಾದುದು. ಸಕಲಜೀವರೂ ಶ್ರೀಹರಿಗೆ ಅಧೀನರು ಹಾಗೂ ಅನನ್ಯ ದಾಸರು. ಜೀವರು ಪರಸ್ಪರ ಭೇದವುಳ್ಳವರು. ಜೀವನಿಗೆ ಸ್ವಸ್ವರೂಪಾನಂದದ ಅಭಿವ್ಯಕ್ತಿಯೇ ಮುಕ್ತಿ. ಅಂತಹ ಮೋಕ್ಷಹೊಂದಲು ನಿರ್ಮಲವೂ ಪರಿಶುದ್ಧವೂ ಆದ ಭಕ್ತಿಯೇ ಮುಖ್ಯಸಾಧನ. ಪ್ರತ್ಯಕ್ಷ, ಅನುಮಾನ, ಆಗಮ ಎಂಬುದಾಗಿ ಪ್ರಮಾಣಗಳು ಮೂರು. ಶ್ರೀಹರಿಯೇ ಸಮಸ್ತವೇದಶಾಸ್ತ್ರಗಳೆಲ್ಲ ದರಲ್ಲಿಯೂ ಪ್ರತಿಪಾದ್ಯನಾಗಿರುವ ಸರ್ವೋತ್ತಮನು.

ಮಧ್ವದರ್ಶನವು "ದ್ವೈತ" ಎಂಬ ಹೆಸರಿನಿಂದ ಜನಪ್ರಿಯವಾಗಿದೆ. ಶ್ರೀಮಧ್ವರ ಬ್ರಹ್ಮಜಿಜ್ಞಾಸೆಯೇ ಅದರ ಕೇಂದ್ರ. ಆನಂದಾಯಕವಾದ ದರ್ಶನದ ವಿವರಣೆಯನ್ನು ನೀಡಿರುವುದರಿಂದ ಅವರಿಗೆ "ಮಧು" ಎಂಬ ಶಬ್ದದಿಂದ ವ್ಯುತ್ಪನ್ನವಾದ "ಮಧ್ವ" ಎಂಬ ಹೆಸರು ಬಂದಿದೆ. ಈ ಕಾರಣದಿಂದಲೇ ಅವರು "ಆನಂದತೀರ್ಥ"ರೆಂದೂ ಪ್ರಸಿದ್ಧ ರಾಗಿದ್ದಾರೆ. ಪೂರ್ಣನಾದ ಬ್ರಹ್ಮನನ್ನು ಅರಿತಿರುವುದರಿಂದ ಅವರನ್ನು "ಪೂರ್ಣಪ್ರಜ್ಞ" ಮತ್ತು "ಸರ್ವಜ್ಞ" ಎಂದು ಕರೆಯುತ್ತಾರೆ. ತಮ್ಮ ಗ್ರಂಥಗಳಲ್ಲಿ ತಾವು ಪ್ರಾಣಾಧಿದೇವತೆಯಾದ ಮುಖ್ಯವಾಯುವೆಂದೂ, ಬ್ರಹ್ಮಮೀಮಾಂಸೆಗೆ ಅಥವಾ ಬ್ರಹ್ಮ ಜಿಜ್ಞಾಸೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಗಾಢವಾಗಿ ಅಭ್ಯಾಸ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ತಾವು ಬ್ರಹ್ಮ ಮೀಮಾಂಸೆಗೆ ವ್ಯಾಖ್ಯಾನ ಮಾಡಲು ತೊಡಗಿದ್ದಕ್ಕೆ ಅವರು ಈ ರೀತಿ ಕಾರಣಗಳನ್ನು ಹೇಳುತ್ತಾರೆ:

> **ದುಃಖದ ಕಳಂಕದಿಂದ ದೂರವಾದ ಆನಂದದ ಅನುಭವವೇ, ಎಲ್ಲ ಚೇತನಗಳಿಗೂ ಪರಮ ಪ್ರಯೋಜನ. ಎಲ್ಲ ಪದಾರ್ಥಗಳಲ್ಲೂ ಅಂತರ್ಯಾಮಿಯಾಗಿರುವ ಪರತತ್ತ್ವವಾದ ಬ್ರಹ್ಮನ ಅನುಗ್ರಹದಿಂದಲೇ ಇದನ್ನು ಹೊಂದಲು ಸಾಧ್ಯ. ಬ್ರಹ್ಮಜ್ಞಾನವು ಆ ಪರಬ್ರಹ್ಮನನ್ನು ಕುರಿತ ಅವಿಚಲಿತ ಧ್ಯಾನದಲ್ಲಿ ಕೊನೆಗೊಳ್ಳುತ್ತದೆ.**

ಮಧ್ವಾಚಾರ್ಯರಿಗೆ, ಸೂತ್ರಗಳ ಕರ್ತೃವಾದ ಬಾದರಾಯಣರ ಅಭಿಪ್ರಾಯಕ್ಕನುಗುಣವಾಗಿ ಅವುಗಳನ್ನು ವ್ಯಾಖ್ಯಾನ ಮಾಡುವ ಸಂದರ್ಭ ಒದಗಿತು. ಮಧ್ವಾಚಾರ್ಯರು ಒಟ್ಟು ೩೭ ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಬ್ರಹ್ಮಸೂತ್ರಭಾಷ್ಯ, ಅಣುವ್ಯಾಖ್ಯಾನ, ನ್ಯಾಯವಿವರಣ ಮತ್ತು ಅಣುಭಾಷ್ಯ ಇವು ಬ್ರಹ್ಮಸೂತ್ರಗಳ ಅಭಿಪ್ರಾಯಗಳನ್ನು ವ್ಯಾಖ್ಯಾನಿಸುವವು. ಈ ನಾಲ್ಕು ಕೃತಿಗಳಲ್ಲಿ ಹೇಳಲ್ಪಟ್ಟ ಅಭಿಪ್ರಾಯಗಳೇ ಅವರ ಇತರ ಕೃತಿಗಳಲ್ಲೂ ವಿಶೇಷವಾಗಿ ಕಂಡುಬರುತ್ತವೆ. ಮಧ್ವಾಚಾರ್ಯರು ದಶೋಪನಿಷದ್ಭಾಷ್ಯಗಳನ್ನೂ, ದಶಪ್ರಕರಣಗಳನ್ನೂ, ಋಗ್ಭಾಷ್ಯ, ಗೀತಾಭಾಷ್ಯ, ಗೀತಾತಾತ್ಪರ್ಯ, ಮಹಾಭಾರತ ತಾತ್ಪರ್ಯನಿರ್ಣಯ ಮತ್ತು ಭಾಗವತ ತಾತ್ಪರ್ಯ ಮೊದಲಾದ ಗ್ರಂಥಗಳನ್ನೂ ಬರೆದರು. ಉಳಿದ ಅವರ ಗ್ರಂಥಗಳು, ಅವರ ಉಪದೇಶಗಳ ಅನುಷ್ಠಾನ ಕ್ರಮಗಳನ್ನು ತಿಳಿಸುತ್ತವೆ. ಉಪದೇಶದ ಹಿನ್ನೆಲೆಯಲ್ಲೇ ಅವರ ದರ್ಶನ, ಜ್ಞಾನವಾದ ಮತ್ತು ಅಧ್ಯಾತ್ಮಶಾಸ್ತ್ರಭಾಗಗಳನ್ನು ಸಂಗ್ರಹವಾಗಿ ವಿವರಿಸಬಹುದು.

## ಮಧ್ವಾಚಾರ್ಯರ ಜ್ಞಾನವಾದ

ಜ್ಞಾನವಿಷಯಕವಾದ ಸಿದ್ಧಾಂತವು ತತ್ತ್ವವನ್ನರಿಯಲು ಇರುವ ಏಕೈಕ ಮಾರ್ಗ. ಜ್ಞಾನಸಿದ್ಧಾಂತಗಳನ್ನು ಅರಿಯಲು, ಅತ್ಯಂತ ಶ್ರದ್ಧೆಯಿಂದ ಸತ್ಯವನ್ನು ಅರ್ಥಮಾಡಿಕೊಳ್ಳಲು, ಪೂರ್ಣವಾಗಿ ಪ್ರಯತ್ನಿಸುವ ಅಧಿಕಾರದ ಅವಶ್ಯಕತೆಯನ್ನು ಮಧ್ವಾಚಾರ್ಯರು ಒತ್ತಿ ಹೇಳಿದ್ದಾರೆ. ತತ್ವವನ್ನರಿಯಲು ಮೊತ್ತ ಮೊದಲು ಅದರ ಮೂಲವನ್ನು ಸ್ಪಷ್ಟಪಡಿಸಬೇಕು. ಅದಕ್ಕಾಗಿ ಮಧ್ವಾಚಾರ್ಯರು ಜ್ಞಾನದ ಸಂಪೂರ್ಣ ಕ್ಷೇತ್ರವನ್ನೇ ಪರಿಶೋಧಿಸಿದ್ದಾರೆ.

ಮಧ್ವಾಚಾರ್ಯರು,"ಜ್ಞಾನಕ್ಕೆ ಸಾಧನ ಒಂದೇ, ಅದೇ ವೇದ. ಅದರ ಪ್ರಾಮಾಣ್ಯವು ಸ್ವತಃಸಿದ್ಧ" ಎಂದಿದ್ದಾರೆ. ವೇದಗಳು ಪ್ರಮಾಣವೆಂದು ಹೇಳುವುದರಿಂದ ಬ್ರಹ್ಮಸೂತ್ರಗಳಿಂದ ತೋರಿ ಬಂದ ವಿಚಾರಗಳ ಬೆಳಕಿನಲ್ಲಿ ವೇದಗಳ ಅರ್ಥನಿರ್ಣಯವನ್ನು ಮಾಡಬೇಕೆಂಬುದು ಸ್ಪಷ್ಟ. ಈ ಅರ್ಥನಿರ್ಣಯ ಕ್ರಮಕ್ಕೆ **ಬ್ರಹ್ಮಮೀಮಾಂಸಾ** ಅಥವಾ **ಬ್ರಹ್ಮಜಿಜ್ಞಾಸಾ** ಎಂದು ಹೆಸರು. ಅದು ಕ್ಷಣೇ ಕ್ಷಣೇ ವೃದ್ಧಿ ಹೊಂದುತ್ತಿರುವ ಬುದ್ಧಿಯ ನಿರಂತರ ಕ್ರಿಯಾತ್ಮಕತೆಯಲ್ಲದೆ ಬೇರಲ್ಲ. ಅನವರತವಾದ ಈ ಕ್ರಮದಲ್ಲಿ ಮೂರು ಅಂಶಗಳನ್ನು ನಿರೂಪಿಸಬಹುದು; ಅವು **ಶ್ರವಣ** – ವೇದದ ಅರ್ಥವನ್ನು ತಿಳಿದುಕೊಳ್ಳುವುದು; **ಮನನ** – ಪುನಃ ಪುನಃ ಚಿಂತಿಸುವುದರಿಂದ ಸರ್ವ ಸಂಶಯ ನಿವಾರಣೆ; **ನಿದಿಧ್ಯಾಸನ** – ಈ ಜಿಜ್ಞಾಸೆಗೋಸ್ಕರ ಜೀವನವನ್ನೇ ಅರ್ಪಣವಾಗಿಡುವುದು. ಈ ಅರ್ಪಣೆಯಿಂದ ಅತ್ಯುತ್ಕಟ ಪ್ರೀತಿಯುಂಟಾಗುವುದು. ಈ ಅನನ್ಯ ಪ್ರೀತಿಗೆ **'ಭಕ್ತಿ'** ಎಂದು ಹೆಸರು. ಇದು ಜಿಜ್ಞಾಸೆಗೆ ಪ್ರೋತ್ಸಾಹ ಕೊಡುತ್ತದೆ. ಏಕೆಂದರೆ ತೀವ್ರವಾದ ಭಕ್ತಿಗೆ ಜಿಜ್ಞಾಸೆಯೇ ಕಾರಣ. ಅರಿಯಬೇಕೆಂಬ ಮನೋಭಾವವುಂಟುಮಾಡುವ ಇದು ಶ್ರವಣಕ್ಕೆ ಕಾರಣವಾಗುವುದು. ಜಿಜ್ಞಾಸಾ ಪ್ರಕ್ರಿಯೆ ಈ ರೀತಿ ಉತ್ತರೋತ್ತರ ಅಭಿವೃದ್ಧಿಯಾಗುತ್ತಿರುವುದು. ಒಂದು ಸಲ ಇದು ಉಂಟಾದ ನಂತರ ಮನುಷ್ಯನು ಅದರಲ್ಲೇ ನಿರತನಾಗುತ್ತಾನೆ. ಅಲ್ಲದೆ, ಅದರಿಂದ ಅವನು ನಿವೃತ್ತನಾಗುವಂತೆಯೇ ಇಲ್ಲ.

## ಮಧ್ವಾಚಾರ್ಯರ ಪ್ರಮೇಯವಾದ

'ಸತ್' ಆದದ್ದು ಯಾವುದೋ ಅದೇ ಸತ್ಯ – ಜ್ಞಾನಕ್ಕೆ ವಿಷಯವಾಗಿರುವ ಸ್ಥಿತಿ. ಅದು ಬ್ರಹ್ಮಮೀಮಾಂಸೆಯಿಂದ ನಿರೂಪಿಸಲ್ಪಡುತ್ತದೆ. ಮಧ್ವಾಚಾರ್ಯರು ಬ್ರಹ್ಮಮೀಮಾಂಸೆಯ ಪ್ರಮುಖ ವಿಷಯಗಳನ್ನು ಬ್ರಹ್ಮಸೂತ್ರದ ಮೊದಲನೆಯ ೩ ಸೂತ್ರಗಳಲ್ಲಿ ಕೊಟ್ಟಿದ್ದಾರೆ. ಒಟ್ಟು ೫೬೪ ಬ್ರಹ್ಮಸೂತ್ರಗಳಿದ್ದು, ಅವು ೪ ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟಿವೆ.

೧. ಶುದ್ಧವಾದ ಆನಂದವನ್ನು ಪಡೆಯಲು ವೇದ ಮತ್ತು ಬ್ರಹ್ಮದ ಜಿಜ್ಞಾಸೆ ಅವರ್ಜನೀಯ ಎಂಬುದನ್ನು ಮಧ್ವಾಚಾರ್ಯರು ಮೊದಲನೆಯ ಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ. ಪರಬ್ರಹ್ಮವು ವೇದದಿಂದಲೇ ಪ್ರತಿಪಾದಿಸಲ್ಪಡುವುದು. 'ವಿಷ್ಣು', 'ನಾರಾಯಣ' ಮತ್ತು 'ಹರಿ' ಇವು ಭಗವಂತನ ವೈದಿಕ ಪರ್ಯಾಯಪದಗಳು.

೨. ಎರಡನೆಯ ಸೂತ್ರದಲ್ಲಿ, ಮಧ್ವಾಚಾರ್ಯರು, ಪ್ರಪಂಚದ ಎಲ್ಲ ಪದಾರ್ಥಗಳಿಗೂ ಸತ್ಯತ್ವವನ್ನು ಕೊಡುವ ಪರಬ್ರಹ್ಮನನ್ನು ಪ್ರತಿಪಾದಿಸಿದ್ದಾರೆ. ಅವರು ಎರಡು ವಿಧವಾದ ತತ್ತ್ವವನ್ನು ಪ್ರತಿಪಾದಿಸಿದ್ದಾರೆ – ಸ್ವತಂತ್ರ ಮತ್ತು ಪರತಂತ್ರ. ಇದರಲ್ಲಿ

ಮೊದಲನೆಯದರ ಸತ್ಯತ್ವವು ಸ್ವತಃಸಿದ್ಧ. ಎರಡನೆಯದರ ಸತ್ಯತ್ವವು ಮೊದಲನೆಯದನ್ನು ಅವಲಂಬಿಸಿದೆ.

ಜಡ ಪದಾರ್ಥಗಳಲ್ಲಿ ವೇದವು ಅನಾದಿ ಮತ್ತು ಅನಂತ. ಪ್ರಕೃತಿ, ಕಾಲ ಮತ್ತು ದೇಶ ಇವುಗಳು ನಿತ್ಯ ಮತ್ತು ಅನಿತ್ಯವಾದ ವಸ್ತುಗಳಿಂದ ಕೂಡಿವೆ. ಪ್ರತಿಯೊಂದರಲ್ಲೂ ದ್ರವ್ಯವು ಶಾಶ್ವತ ಮತ್ತು ಗುಣಗಳು ಪರಿಣಾಮಿ (ಪರಿಣಾಮ ಉಳ್ಳವು). ಕಾರ್ಯಗಳು ಕಾಲಕ್ರಮದಲ್ಲಿ ಉತ್ಪತ್ತಿ ಮತ್ತು ವಿನಾಶವುಳ್ಳವು.

ಪ್ರತಿಯೊಂದು ಪದಾರ್ಥದ ಅಸ್ತಿತ್ವವು ಮುಖ್ಯವಾಗಿ ಬ್ರಹ್ಮನಿಂದ ಆದದ್ದು. ನಿತ್ಯನಾದ ಬ್ರಹ್ಮನಿಂದ ಆ ರೀತಿ ಸೃಷ್ಟಿಸಲ್ಪಟ್ಟಿರುವುದೇ ಪದಾರ್ಥಗಳು ನಿತ್ಯವಾಗಿ ಅಥವಾ ಸತ್ಯವಾಗಿರುವುದಕ್ಕೆ ಕಾರಣ.

ಬ್ರಹ್ಮನ ಸೃಜನಕ್ರಿಯೆಯು ಗೊಂದಲಕ್ಕೆ ಅವಕಾಶ ಕೊಡುವುದಿಲ್ಲ. ಈ ತತ್ತ್ವವನ್ನು ವಿವರಿಸಲು ಮಧ್ವಾಚಾರ್ಯರು ಬ್ರಹ್ಮನಿಗೂ ಜೀವನಿಗೂ ಇರುವ ಪಂಚವಿಧ ಭೇದಗಳನ್ನು ಪ್ರತಿಪಾದಿಸುತ್ತಾರೆ:

೧. **ಬ್ರಹ್ಮನಿಗೂ ಜೀವನಿಗೂ ಇರುವ ಭೇದ**

೨. **ಬ್ರಹ್ಮನಿಗೂ ಜಡಕ್ಕೂ ಇರುವ ಭೇದ**

೩. **ಜೀವನಿಗೂ ಜಡನಿಗೂ ಇರುವ ಭೇದ**

೪. **ಜೀವನಿಗೂ ಮತ್ತೊಂದು ಜೀವಿಗೂ ಇರುವ ಭೇದ**

೫. **ಜಡಕ್ಕೂ ಮತ್ತೊಂದು ಜಡಕ್ಕೂ ಇರುವ ಭೇದ**

ಪ್ರಪಂಚದಲ್ಲಿರುವ **ಚೇತನ, ಅಚೇತನ, ಮತ್ತು ಬ್ರಹ್ಮ** ಇವು ವಿಭಿನ್ನ ತತ್ತ್ವಗಳೆಂದು ಮಧ್ವಾಚಾರ್ಯರು ನಿರ್ಣಯ ಮಾಡಿದ್ದಾರೆ.

ಪ್ರಪಂಚದ ಪ್ರತಿಯೊಂದು ಪದಾರ್ಥವೂ ಪರಿಣಾಮವುಳ್ಳದ್ದು. ಆದ್ದರಿಂದಲೇ ಅದಕ್ಕೆ ಉತ್ಪತ್ತಿ ಮತ್ತು ನಾಶಗಳಿವೆ. ಬ್ರಹ್ಮವೇ ಈ ವಿಕಾರಗಳಿಗೆಲ್ಲ ಕಾರಣ ಮತ್ತು ಬ್ರಹ್ಮವೊಂದೇ ನಿರ್ವಿಕಾರ. ಸಮಗ್ರವಾದ ಈ ವಿಶ್ವವು ಯಾರ ಸಹಾಯವೂ ಇಲ್ಲದೆ ಪೂರ್ಣವಾಗಿ ಬ್ರಹ್ಮನಿಂದಲೇ ರಚಿಸಲ್ಪಟ್ಟಿದ್ದು.

೩. ಮೂರನೆಯ ಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯೊಂದೇ ಬ್ರಹ್ಮಜ್ಞಾನಕ್ಕೆ ಮೂಲವೆಂಬುದನ್ನು ಮಧ್ವರು ತೋರಿಸಿದ್ದಾರೆ.

೪. ನಾಲ್ಕನೆಯ ಸೂತ್ರದಲ್ಲಿ ಮಧ್ವಾಚಾರ್ಯರು, ಆ ಬ್ರಹ್ಮವು ಅನಂತ ಕಲ್ಯಾಣ ಪರಿಪೂರ್ಣವಾಗಿರುವುದರಿಂದಲೇ 'ಬ್ರಹ್ಮ' ಎಂದು ಕರೆಸಿಕೊಳ್ಳುತ್ತದೆ ಎಂದು ಪ್ರತಿಪಾದಿಸುತ್ತಾರೆ. ಇವುಗಳಲ್ಲಿ ಒಂದೊಂದು ಗುಣವೂ, 'ಪೂರ್ಣ' ಅಂದರೆ ಕಾಲ ಮತ್ತು ದೇಶಾತೀತ. ಈ ಕಾರಣದಿಂದಲೇ ಬ್ರಹ್ಮವು 'ವಿಷ್ಣು' ವೆಂದು ಕರೆಯಲ್ಪಡುತ್ತದೆ. ವೇದದಲ್ಲಿರುವ ಪ್ರತಿಯೊಂದು ಶಬ್ದವೂ ಪರಮಾತ್ಮವಾಚಕವೆಂದೂ ಅದರಿಂದ ಬೇರೆ ಶಬ್ದಗಳು, ಯಾವ ಭಾಷೆಯಲ್ಲೇ ಆಗಲಿ, ಯಾವ ಕಾಲದಲ್ಲಿಯೇ ಆಗಲಿ, ಮೊತ್ತಮೊದಲು ಆ ಶಬ್ದದಿಂದಲೇ ಬೋಧಿತವಾದ ಗುಣದಿಂದ ಕೂಡಿರುವ 'ಬ್ರಹ್ಮ' ವಾಚಕವೆಂದೂ, ಈ ಶಬ್ದಗಳು ಪ್ರಾಪಂಚಿಕ ಪದಾರ್ಥಗಳಿಗೆ ಅನ್ವಯಿಸುವಾಗಲೂ ಆ ಗುಣದಿಂದ ಕೂಡಿರುವ ಬ್ರಹ್ಮವೇ ಈ ಪದಾರ್ಥಗಳಲ್ಲಿ ಅಂತರ್ಗತವಾದ ತತ್ತ್ವವೆಂದೂ ಮಧ್ವಾಚಾರ್ಯರು ಸ್ಪಷ್ಟಪಡಿಸುತ್ತಾರೆ. ನಿರ್ವಚನದ ಈ ಕ್ರಮವನ್ನು ಮಧ್ವಾಚಾರ್ಯರು 'ಸಮನ್ವಯ' ವೆಂದು ಕರೆಯುತ್ತಾರೆ.

೫. ಐದನೆಯ ಸೂತ್ರದಲ್ಲಿ ಹೇಗೆ ಬ್ರಹ್ಮವೊಂದೇ ತಿಳಿಯಬೇಕಾದ ತತ್ತ್ವವೆಂದೂ, ಅದನ್ನು ತಿಳಿಯುವುದರಿಂದ ಮತ್ತೆಲ್ಲವೂ ತಿಳಿಯುವುದೆಂದೂ ತೋರಿಸಿದ್ದಾರೆ.

ಮೊದಲನೆಯ ಅಧ್ಯಾಯದ ಉಳಿದ ಭಾಗದಲ್ಲಿ ಮಧ್ವಾಚಾರ್ಯರು ಪ್ರತಿಯೊಂದು ವಿಧವಾದ ವೈದಿಕ ಶಬ್ದವನ್ನೂ ಅಧ್ಯಯನ ಮಾಡಿ, ಅದನ್ನು ಬ್ರಹ್ಮನಿಗೆ ಅನ್ವಯಿಸುತ್ತಾರೆ. ಒಂದು ಸಲ ಒಂದು ಪದವನ್ನು ಸಮನ್ವಯ ಮಾಡಿದನಂತರ ವ್ಯಾಖ್ಯಾನದಲ್ಲಿ ಅದನ್ನು ಅಳವಡಿಸಿಕೊಳ್ಳುತ್ತಾರೆ.

ಆ ರೀತಿ ಅವರ ಭಾಷ್ಯವು ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಪ್ರತಿಯೊಂದು ಪದವೂ ಸರ್ವಕರ್ತೃವಾದ ಬ್ರಹ್ಮವನ್ನೇ ಪ್ರತಿಪಾದಿಸುವುದರಿಂದ, ಅವರ ದೃಷ್ಟಿಯಲ್ಲಿ ಮಂಗಳಕರವಾದ ಅಥವಾ ಅಮಂಗಳಕರವಾದ ಶಬ್ದಗಳಿಗೆ ವ್ಯತ್ಯಾಸವೇ ಇಲ್ಲ. ಬ್ರಹ್ಮವಿಷಯಕವಾದ ವಾಸ್ತವ ಜ್ಞಾನವಿಲ್ಲದಿರುವುದೇ ಭಿನ್ನವಾದಗಳಿಗೂ ಅವುಗಳನ್ನವಲಂಬಿಸಿದ ದರ್ಶನಗಳಿಗೂ ಕಾರಣವೆಂದು ಎರಡನೆಯ ಅಧ್ಯಾಯವಾದ 'ಅವಿರೋಧಾಧ್ಯಾಯ' ದಲ್ಲಿ ಅವರು ತೋರಿಸಿದ್ದಾರೆ. ಬ್ರಹ್ಮ ಮೀಮಾಂಸೆಯೊಂದೇ ದಿವ್ಯಸಾಧನವೆಂದು ಮೂರನೆಯ 'ಸಾಧನಾಧ್ಯಾಯ'ದಲ್ಲಿ ತೋರಿಸಿದ್ದಾರೆ. ನಾಲ್ಕನೆಯ 'ಫಲಾಧ್ಯಾಯ'ದಲ್ಲಿ ಬ್ರಹ್ಮಮೀಮಾಂಸಾ ಜ್ಞಾನವು ಆನಂದ ರೂಪವಾದ ಬ್ರಹ್ಮಪ್ರಾಪ್ತಿಯನ್ನು ಉಂಟುಮಾಡುವುದೆಂದೂ ತೋರಿಸಿದ್ದಾರೆ.

### ಉಪಸಂಹಾರ

ಇದು ಮಧ್ವಾಚಾರ್ಯರ ಬ್ರಹ್ಮಮೀಮಾಂಸೆಯ ರೂಪರೇಖೆ. ಅವರು ಬ್ರಹ್ಮನಿಂದ ಅತಿರಿಕ್ತವಾದುದು ಯಾವುದೂ ಇಲ್ಲವೆಂದು ನಿರೂಪಿಸಿದ್ದಾರೆ. ಮಧ್ವಾಚಾರ್ಯರ ಮಾತಿನಲ್ಲೇ ಹೇಳುವದಾದರೆ **"ಬ್ರಹ್ಮಣೋऽನ್ಯತ್ರ ಜಗತೋ ಅಭಾವತಾ"** – ಬ್ರಹ್ಮನನ್ನು ಬಿಟ್ಟರೆ ಬೇರೆ ಜಗತ್ತೇ ಇಲ್ಲ. ಈ ರೀತಿ ಮಧ್ವಾಚಾರ್ಯರು (ಬಹುಮುಖವಾದ ಈ ವಿಶ್ವವನ್ನು ಒಂದು ತತ್ವದಲ್ಲಿ ನಿರೂಪಿಸುವ) ವೇದೋಕ್ತವಾದ ತತ್ತ್ವವನ್ನು ಪರಿಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ. ಈ ಭಾವನೆಯೇ ಅವರ ದೃಷ್ಟಿಯಲ್ಲಿ "ಆನಂದ" ಎನ್ನಿಸಿಕೊಳ್ಳುತ್ತದೆ. **(ಸಂಗ್ರಹ)**

(**ಅನುವಾದಕರು:** ಶ್ರೀ ಎಂ.ಎ. ಲಕ್ಷ್ಮೀತಾತಾಚಾರ್;
**ಆಧಾರ:** ಕರ್ನಾಟಕದ ಪರಂಪರೆ, ಸಂಪುಟ ೧)